International Journal of Kannada Research 2020; 6(1): 139-142

International Journal of Kannada Research
www.kannadajournal.com

ISSN: 2454–5813
IJKR 2020; 6(1): 139-142
© 2020 IJKR
www.kannadajournal.com
Received: 04-11-2019
Accepted: 06-12-2019

**ಬಮ್ಮನಕಟ್ಟಿ ಮಂಜುನಾಥ**
ಸಂಶೋಧನಾ ವಿದ್ಯಾರ್ಥಿ,
ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

**ಡಾ.ರಾಮಕೃಷ್ಣ ಎಂ. ಮರಾಠೆ**
ಮಾರ್ಗದರ್ಶಕರು. ರಾಣಿ ಚೆನ್ನಮ್ಮ
ವಿಶ್ವವಿದ್ಯಾಲಯ, ಬೆಳಗಾವಿ.

Corresponding Author:
ಬಮ್ಮನಕಟ್ಟಿ ಮಂಜುನಾಥ
ಸಂಶೋಧನಾ ವಿದ್ಯಾರ್ಥಿ,
ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

# ಬದುಕಿನ ಚಳುವಳಿ ಅನಾವರಣಗೊಳಿಸುವ ಎರಡು ವಚನಗಳು

## ಬಮ್ಮನಕಟ್ಟಿ ಮಂಜುನಾಥ, ಡಾ.ರಾಮಕೃಷ್ಣ ಎಂ. ಮರಾಠೆ

ವಚನಕಾರರಲ್ಲಿ ಅಲ್ಲಮಪ್ರಭು ಅತ್ಯಂತ ಪ್ರಮುಖ ವಚನಕಾರ. ಅನುಭವ ಮಂಟಪದ ಅಧ್ಯಕ್ಷರಾಗಿ, ಶೂನ್ಯಪೀಠದ ಪೀಠಾಧಿಪತಿಯಾಗಿ ತನ್ನ ಅನುಭವದ ಆಳ ಅಗಲವನ್ನು ವಿನಿಮಯ ಮಾಡಿಕೊಂಡ ಅಲ್ಲಮಪ್ರಭು ಒಬ್ಬ ವಿಜ್ಞಾನಿ, ತತ್ವಜ್ಞಾನಿ ಕೂಡ ಹೌದು. ಒಟ್ಟಾರೆ ಅವನ ಅನುಭವದ ಆಳ-ಅಗಲಗಳನ್ನು ತಿಳಿದು ಹೇಳುವುದಾದರೆ ಅವನೊಬ್ಬ ತ್ರಿಕಾಲ ಜ್ಞಾನಿ. ಹೀಗಾಗಿ ಅಲ್ಲಮಪ್ರಭು ವಚನಕಾರರಲ್ಲಿ ಅತ್ಯಂತ ಪ್ರಮುಖ ಹಾಗೂ ಶ್ರೇಷ್ಠ ವಚನಕಾರ ಕೂಡ ಆಗಿದ್ದ. ಇದಕ್ಕೆ ಅನುಭವ ಮಂಟಪದ ಅಧ್ಯಕ್ಷ ಪದವಿ ಸಾಕ್ಷಿಯಾಗಿದೆ.

ಅಲ್ಲಮಪ್ರಭು ತ್ರಿಕಾಲ ಜ್ಞಾನಿ. ಆಗಿದ್ದರೂ ಎನ್ನುವುದಕ್ಕೆ ಅವರ ವಚನಗಳೇ ಸಾರಿ, ಸಾರಿ ಹೇಳುತ್ತವೆ. ಇದಕ್ಕೆ ಪುಷ್ಠಿಕೊಡಬಲ್ಲ ಎರಡು ವಚನಗಳನ್ನು ಇಟ್ಟುಕೊಂಡು ಅವನ ಆಳ ಹರವನ್ನು ಇಲ್ಲಿ ನೋಡಲಾಗಿದೆ. ಈ ಎರಡು ವಚನಗಳು ಅಲ್ಲಮನ ಅಗಾಧ ಚಿಂತನಶಕ್ತಿ, ಅವನ ಮುಂದಿನ ಹೊಳವು ಸೂಚಿಸುವ ರೀತಿ ಬೆರಗು ಮೂಡಿಸುತ್ತದೆ. ಬೆರಗು-ಬೆರಗಾಗಿಸುವ ಆ ಎರಡು ವಚನಗಳನ್ನು ನೋಡಿದ ನಂತರ ಅವುಗಳ ಆಳಕ್ಕೆ ಇಳಿದು ಜೊತೆ, ಜೊತೆಗೆ ನಿಮ್ಮ ಚಿಂತನಾಶಕ್ತಿಗೂ ಕೆಲಸ ತನ್ನಿಂದ ತಾನೆ ಆರಂಭವಾಗುತ್ತದೆ. ಮುಖ್ಯವಾಗಿ ಈ ವಚನಗಳು ಮನುಷ್ಯ ಬದುಕಿನ ಒಳ ಚಳುವಳಿಗಳನ್ನು ತೆರೆದಿಡುತ್ತಾ ಹೋಗುತ್ತವೆ.

**ಆ ಎರಡು ವಚನಗಳು ಹೀಗಿವೆ.....**

**ವಚನ-೧**

ಪಾತಾಳದಿಂದತ್ತ ಮಾತಬಲ್ಲವರಿಲ್ಲ
ಗಗನದ ಮೇಲೆ ಅನುಭಾವ ತಾನಿಲ್ಲ.
ಒಳಗಣ ಜ್ಯೋತಿಯ ಬೆಳಗಬಲ್ಲವರಿಲ್ಲ
ಹೊರಗಣ ಹೊರಗನು ಅರಿಯಬಲ್ಲವರಿಲ್ಲ
ಹಿಂದಣ ಹಿಂದನು
ಮುಂದಣ ಮುಂದನು
ತಂದೆ ತೋರಿದನು ನಮ್ಮ ಗುಹೇಶ್ವರ!

**ವಚನ-೨**

ಎಣ್ಣೆ ಬೇರೆ, ಬತ್ತಿಬೇರೆ ಎರಡು ಕೂಡಿ ಸೊಡರಾಗಿತ್ತು
ಪಾಪಬೇರೆ, ಪುಣ್ಯಬೇರೆ ಎರಡು ಕೂಡಿ ಒಡಲಾಗಿತ್ತು.
ಮಿಗಬಾರದು, ಮಿಗದಿರಬಾರದು
ಒಡಲಿಚ್ಚೆಯನು ಸಲಿಸದೆ ನಿಮಿಷವಿರಬಾರದು ಕಾಯಗುಣವನಳಿದು ಮಾಯಾಜ್ಯೋತಿ ವಾಯುವ ಕೂಡುವ ಮುನ್ನ

**ಭಕ್ತಿಯ ಮಾಡಬಲ್ಲತಾನೆ ದೇವ ಗುಹೇಶ್ವರ!**

ಮೇಲಿನ ಈ ಎರಡು ವಚನಗಳು ನಮ್ಮ ಬದುಕಿಗೆ ಅತ್ಯಂತ ಹತ್ತಿರದಲ್ಲಿ ನಿಲ್ಲುವ, ನಿಲ್ಲಿಸುವಂತಹ ವಚನಗಳಾಗಿವೆ. ಈ ಎರಡು ವಚನಗಳನ್ನು ಓದುತ್ತಿದ್ದಂತೆ ಒಂದು ರೀತಿಯ ಸಂಚಲನ ಮನದಾಳದಲ್ಲಿ ಹರಿಯುತ್ತದೆ. ಜೊತೆಗೆ ವಚನದ ಪ್ರತಿ ಸಾಲು ಒಳಗೊಳಗೆ ಕೊರೆಯಲು ಆರಂಭಿಸುತ್ತದೆ. ಮೊದಲ ವಚನದ ಮೊದಲ ಸಾಲಿನಿಂದ ಅಲ್ಲಮನ ಆಳ ಹರವನ್ನು ನನ್ನ ಅರಿವಿನ

ಮಿತಿಯಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಲು ಯತ್ನಿಸುತ್ತೇನೆ. ಈ ಸಂದರ್ಭದಲ್ಲಿ ನಿಮ್ಮಲ್ಲಿ ಹೊಸ ಹೊಳವು- ಆಲೋಚನೆ ಬಂದರೆ ಅದು ನನಗೆ ಪರೋಕ್ಷ ಸಾರ್ಥಕತೆಯೂ ಹೌದು.

ವಚನದ ಮೊದಲಸಾಲಿನಲ್ಲಿ "ಪಾತಾಳದಿಂದತ್ತ ಮಾತುಬಲ್ಲವರಿಲ್ಲ" ಎನ್ನುತ್ತಾನೆ. ಹೌದು ನಮ್ಮ ಭೂಮಿಯಿಂದ ಕೆಳಗೆ ಹೋದರೆ ಮಾತನಾಡುವ ಯಾವ ಪ್ರಾಣಿ ಸಿಗಲು ಸಾಧ್ಯವಿಲ್ಲ. ಪಾತಾಳ ಅನ್ನೋ ಪದವನ್ನು ಕೂಡ ನಾವು ಈ ಕಾಲದಿಂದ ಹಿಡಿದು ನಮ್ಮ ಮಹಾಭಾರತ, ರಾಮಾಯಾಣ ಕಾಲದಿಂದಲೂ ಹಿಡಿದು ಪಂಪನ ಕಾವ್ಯದಲ್ಲಿಯೂ ಬಳಕೆ ಮಾಡುತ್ತೇವೆ. ಪಾತಾಳದಲ್ಲಿ ಅಡಗಿದ್ದರೂ ಅವನನ್ನು ಹುಡುಕಬಲ್ಲೆ, ಹಿಡಿದು ತರಬಲ್ಲೆ, ಮುಗಿಸಬಲ್ಲೆ ಹೀಗೆ ಅನೇಕ ರೀತಿಯಲ್ಲಿ ಪಾತಾಳ ಅನ್ನೋ ಪದ ಬಳಕೆ ಆಗುತ್ತದೆ. ಮಾತನಾಡುವ ಮನುಷ್ಯ ಮಾತ್ರ ಪಾತಾಳದಲ್ಲಿ ಕೆಲಕಾಲ ಅಡಗಿ ಕುಳಿತುಕೊಳ್ಳಬಹುದು, ಆದರೆ ಈ ಪಾತಾಳದಿಂದತ್ತ ಮನುಷ್ಯ ಸಜೀವವಾಗಿ ಹೋಗಲು ಸಾಧ್ಯವಿಲ್ಲ. ಹೀಗಾಗಿ ಅಲ್ಲಮಪ್ರಭು ಪಾತಾಳದಿಂದತ್ತ ಮಾತುಬಲ್ಲವರಿಲ್ಲ ಎಂದಿದ್ದಾನೆ.

ಮುಂದಿನ ಸಾಲು "ಆಕಾಶದ ಮೇಲೆ ಅನುಭವ ತಾನಿಲ್ಲ", ಈ ಸಾಲನ್ನು ನಾವು ವೈಜ್ಞಾನಿಕವಾಗಿ ನೋಡಿದರೆ ನಮ್ಮ ವಿಜ್ಞಾನಿಗಳು ಬಹಳ ಈಚೆಗೆ ಹೇಳಿದ್ದಾರೆ ಅದೇನೆಂದರೆ 'ಆಕಾಶದ ಮೇಲೆ ಯಾವ ಅನುಭವವು ಇಲ್ಲ. ಗಾಳಿ ಕೂಡ ಅಲ್ಲಿ ಇಲ್ಲ. ಅದನ್ನು ಕೂಡ ನಾವು ಇಲ್ಲಿಂದಲೆ ಅಂದರೆ ಆಮ್ಲಜನಕವನ್ನು ತೆಗೆದುಕೊಂಡು ಹೊಗಬೇಕು. ಅಲ್ಲಿ ಗುರುತ್ವಾಕರ್ಷಣೆ ಶಕ್ತಿ ಕೂಡ ಇಲ್ಲ ಎಂದಿದ್ದಾರೆ.

ಆದರೆ ಅಲ್ಲಮಪ್ರಭು ೧೨ನೇ ಶತಮಾನದಲ್ಲಿ "ಆಕಾಶದ ಮೇಲೆ ಅನುಭವ ತಾನಿಲ್ಲ" ಎಂದು ಹೇಳಿರುವುದನ್ನು ನೋಡಿದರೆ, ವಿಜ್ಞಾನಿಗಳಿಗೂ ಮುನ್ನ ಅಲ್ಲಮ ವಿಜ್ಞಾನಿ ಆಗಿದ್ದ ಎನ್ನುವುದನ್ನು ಈ ಸಾಲು ಸ್ಪಷ್ಟ ಪಡಿಸುತ್ತದೆ ಅಲ್ಲವೇ?!. ಆಕಾಶಕ್ಕೆ ಹೋಗುವುದಾದರೆ ಅನುಭವವನ್ನು ತೆಗೆದುಕೊಂಡೆ ಹೋಗಬೇಕು. ಇಲ್ಲವಾದಲ್ಲಿ ನಮ್ಮ ಅನುಭವದ ಉಸಿರು ಕೂಡ ನಿಂತು ಹೋಗುತ್ತದೆ. ಹೀಗಾಗಿ ಆಕಾಶ ಎತ್ತರ ಎತ್ತರಕ್ಕೆ ಎದ್ದು ನಿಂತಿದೆ.

ಇನ್ನು ವಚನದ ಮುಂದಿನ ಸಾಲು ಪ್ರತಿ ಎದೆಯಲ್ಲಿಯೂ ಎಚ್ಚರದ ಘಂಟೆ ಭಾರಿಸುವ ಸಾಲು "ಒಳಗಣ ಜ್ಯೋತಿ ಬೆಳಗಬಲ್ಲವರಿಲ್ಲ" ಎಲ್ಲರಲ್ಲಿಯೂ ಬೆಳಕಿದೆ, ಜ್ಯೋತಿ ಇದೆ. ಆದರೆ ಅದನ್ನು ಹೊತ್ತಿಸುವ ಬೆಳಗಿಸುವ, ಬೆಳಕಾಗಿಸುವ ಯತ್ನಗಳು ಪ್ರಯತ್ನಗಳು ನಡೆಯುತ್ತಿಲ್ಲ ಅನ್ನೊದನ್ನು ಅಲ್ಲಮಪ್ರಭು ತನ್ನ ವಚನದ ಮೂಲಕ ಮತ್ತೆ, ಮತ್ತೆ ಎಚ್ಚರ ಮೂಡಿಸುತ್ತಾನೆ.

ಅಲ್ಲಮನ ಈ ಸಾಲು ಎಷ್ಟು ಮಹತ್ವದ್ದಾಗಿ ನಮ್ಮೆದುರಿಗೆ ನಿಲ್ಲುತ್ತದೆ ಎಂದರೆ ಪ್ರತಿ ಮನುಷ್ಯನಿಗೂ ತನ್ನದೆಯಾದ ಬೆಳಕಿದೆ, ಬದುಕಿದೆ. ಆದರೆ ಅದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾತ್ರ ಪ್ರತಿ ವ್ಯಕ್ತಿ ಮಾಡಬೇಕು. ಈ ಒಳಗಣ ಜ್ಯೋತಿ ಬೆಳಗಬಲ್ಲಲು ಯಾವ ಜಾತಿ-ಕುಲ ಧರ್ಮಗಳು ಅಗತ್ಯವಿಲ್ಲ, ಎಣ್ಣೆ- ಬತ್ತಿಗಳ ಹಂಗಿಲ್ಲ. ಜ್ಯೋತಿ ಹೊತ್ತಿಸುವ ಛಲ ಮತ್ತು ಬಲಗಳು ಮನಸ್ಸಿನಾಳದಲ್ಲಿ ಬೇರೂರಿದ್ದರೆ ಸಾಕು ನಮ್ಮೊಳಗಿನ ದೀಪ ಬೆಳಗಿಸಬಹುದಾಗಿದೆ. ಈ ದೀಪ ಬೆಳಗಿಸಬಹುದಾಗಿದೆ. ಈ ದೀಪ ಇಡೀ ಬದುಕನ್ನು ಬೆಳಗಿಸಬಹುದಾಗಿದೆ.

ಎಲ್ಲಕ್ಕೂ ಮಿಗಿಲಾಗಿ ಅಲ್ಲಮನ ಚಿಂತನಕ್ರಮ ಕೂಡ ಇಲ್ಲಿ ಅತ್ಯಂತ ಗಮನಾರ್ಹವಾದದ್ದು. ಏಕೆಂದರೆ ಅವನ ಈ ವಚನದ ಮೂರುಸಾಲು ಗಮನಿಸಿದರೆ ನಮಗೆ ಅದು ಸ್ಪಷ್ಟವಾಗುತ್ತದೆ. ಅದೇನೆಂದರೆ "ಪಾತಾಳದಿಂದತ್ತ ಮಾತು ಬಲ್ಲವರಿಲ್ಲ, ಆಕಾಶದ ಮೇಲೆ ಅನುಭಾವ ತಾನಿಲ್ಲ, ಒಳಗಣ ಜ್ಯೋತಿ ಬೆಳಗಬಲ್ಲವರಿಲ್ಲ" ಎಂದು ಹೇಳುತ್ತಾನೆ. ಅಂದರೆ ಪಾತಾಳ ನಂತರ ಆಕಾಶ ಈ ಎರಡು ನಡುವೆ ವಾಸಿಸುವ ಸಾಕ್ಷಿ ಪ್ರಜ್ಞೆಯ ಮನುಷ್ಯನ ಕುರಿತು ಅಲ್ಲಮ ಪ್ರಸ್ತಾಪ ಮಾಡುತ್ತಾನೆ. ಅಂದರೆ ಅಲ್ಲಮನಿಗೆ ಈ ಸಾಕ್ಷಿ ಪ್ರಜ್ಞೆ ಆಗಿರುವ ಈ ಮನುಷ್ಯ ಈ ಜಗತ್ತಿನ ಅತ್ಯಂತ ಪ್ರಮುಖ ಜೀವಿ ಅನ್ನೊದು ಎಲ್ಲಕ್ಕೂ ಮಿಗಿಲಾಗಿ ಈ ಜಗತ್ತಿನ ಎಲ್ಲ ಸೃಷ್ಠಿಗಳಲ್ಲಿ ಈ ಮನುಷ್ಯ ಜೀವಿ ಉಳಿದೆಲ್ಲ ಸೃಷ್ಠಿಗಳೊಂದಿಗೆ ಸಂವಹನ ಮಾಡಬಲ್ಲವನಾಗಿದ್ದಾನೆ. ಆದರೆ ಅವನಿಗೆ ಇಂತಹ ಅದ್ಭುತ ಶಕ್ತಿ ಇದ್ದರೂ ಕೂಡ ಅನೇಕ ಬೇಕು-ಬೇಡಾದ ಸೃಷ್ಠಿಗಳನ್ನು ಮಾಡಿಕೊಂಡು ನಿಜವಾದ ಸೃಷ್ಠಿಯ ಜೊತೆಗೆ ಚೆಲ್ಲಾಟವಾಡುತ್ತಿದ್ದಾನೆ ಅನ್ನೋದನ್ನ ಅಲ್ಲಮ ಹೇಳುವ "ಒಳಗಣ ಜ್ಯೋತಿ ಬೆಳಗಬಲ್ಲವರಿಲ್ಲ" ಎನ್ನುವ ಸಾಲು ಸ್ಪಷ್ಟವಾಗುತ್ತದೆ.

ಇನ್ನು ಮುಂದುವರೆದು ಆಕಾಶ-ಪಾತಾಳ ನಂತರ ಇವೆರೆಡರ ಮಧ್ಯ ಇರುವ ಮನುಷ್ಯನ ಕುರಿತು ಹೇಳುವ ಅಲ್ಲಮಪ್ರಭು ನಂತರ ಈ ಮನುಷ್ಯ ಬದುಕುವ ಸಾಮಾಜೀಕ ವ್ಯವಸ್ಥೆಯ ಬಗ್ಗೆ ಹೇಳೊದು ಹೀಗೆ "ಹೊರಗಣ ಹೊರಗನು ಅರಿಯಬಲ್ಲವರಿಲ್ಲ", ಒಳಗಣ ಒಳಗನು ತಿಳಿಯಬಲ್ಲವರಿಲ್ಲ", ಎಂದು. ಈ ಎರಡು ಸಾಲುಗಳಲ್ಲಿ ಅತ್ಯಂತ ಪ್ರಜ್ಞಾ ಪೂರ್ವಕವಾಗಿ ಬುದ್ಧಿಮತ್ತೆಯಿಂದ ಅಲ್ಲಮ ಹೇಳುತ್ತಾನೆ.

ಒಳಗಣ ಒಳಗನು ತಿಳಿಯಬಲ್ಲವರಿಲ್ಲ ಎನ್ನುವ ಮಾತು ಅತ್ಯಂತ ಮಹತ್ವದ್ದು. ಅಂದರೆ ಒಂದು ಕೊಠಡಿ ಒಳಗೆ ಏನೋ ಒಂದು ಚಟುವಟಿಕೆ ನಡೆದಾಗ ನಾವು ಅರ್ಥೈಸಿಕೊಳ್ಳೋದು ಮುಖ್ಯ. ಏಕೆಂದರೆ ಒಂದು ಕೊಠಡಿಯೊಳಗೆ ಒಂದು ಹೆಣ್ಣು-ಒಂದು ಗಂಡು ಇದೆ ಎಂದಾಕ್ಷಣ, ಅಲ್ಲಿ ಅನೈತಿಕವಾದ ಚಟುವಟಿಕೆಯೇ ನಡೆಯುತ್ತದೆ, ನಡೆಯುತ್ತಿದೆ, ನಡೆಯಬಹುದು ಅನ್ನೋ ಅಸಹಜ ಆಲೋಚನೆ ನಮ್ಮಲ್ಲಿ ಮೂಡುತ್ತದೆ.

ಇನ್ನು ಒಳಗಡೆ ಇರುವ ಇಬ್ಬರು ವ್ಯಕ್ತಿಗಳು ಏನೋ ಒಂದು ಮಹತ್ತರವಾದ ವಿಚಾರ-ಚಿಂತನೆ ಮಾಡುತ್ತಿದ್ದಾರೆ. ಅವರಿಬ್ಬರು ಅನೈತಿಕವಲ್ಲದ ಇನ್ನೇನೊ ಮಾಡುತ್ತಿದ್ದಾರೆ ಎಂಬ ಚಿಂತನೆಗೆ ನಾವು ಬರೋದೆ ಅಪರೂಪ. ಇದು ಕೇವಲ ಒಂದು ಗಂಡು, ಒಂದು ಹೆಣ್ಣು ಇದ್ದಾಗಿನ ಪ್ರಶ್ನೆ ಅಷ್ಟ ಅಲ್ಲ. ಒಂದೆ ಲಿಂಗದ ಒಬ್ಬರಾಗಲಿ ಬೇರೆ, ಬೇರೆ ಲಿಂಗದ ಬೇರೆ, ಬೇರೆ ವ್ಯಕ್ತಿಗಳಾಗಲಿ ಎಷ್ಟೆ ಜನ ಒಳಗಿದ್ದಾಗಲೂ ಕೂಡ ನಮ್ಮ ಚಿಂತನೆ ಆರಂಭವಾಗೋದೆ ಕೆಟ್ಟದ್ದರಿಂದ ಅದರ ಒಳಗೆ ಯಾವ ಸಂಬಂಧಗಳಿಂದ ನಡೆದುಕೊಳ್ಳುತ್ತಿದ್ದಾರೆ. ಅವರೆಲ್ಲ ಒಳಗಡೆ ಇದ್ದುಕೊಂಡು ಏನನ್ನೋ ಮಾಡುತ್ತಿದ್ದಾರೆ. ಅಥವಾ ಅವರೆಲ್ಲರೂ ಒಂದೆ ಕಡೆ ಇರೊದಕ್ಕೆ ಅವರವರದೆಯಾದ ಸಮಸ್ಯೆಗಳು ಇವೆ ಅನ್ನೊ ಸಣ್ಣ ವಿಚಾರಕ್ಕೂ ನಾವು ಮುಂದಾಗೊದಿಲ್ಲ. ಒಳಗಿನ ಚಿಂತನೆಯಂತೆ 'ಹೊರಗಿನ ಹೊರಗನು' ಕೂಡ ಅರಿಯುವಲ್ಲಿಯೂ ನಮ್ಮ ಚಿಂತನೆ ಭಿನ್ನವಾಗಿಲು ಸಾಧ್ಯವಿಲ್ಲ. ಎಲ್ಲೋ ದೂರದಲ್ಲಿ ನಮಗೆ ಕಾಣಿಸುತ್ತದೆ. ಕಾಣಿಸಿದಾಗ ನಮ್ಮ ಮನದಲ್ಲಿ ಏನೋ ಹೊಳೆಯುತ್ತದೆ. ಆದ್ರೆ ನಮ್ಮೊಳಗೆ ಹೊಳದದ್ದೆ ಆ ದೃಶ್ಯ ಆಗಿರಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ನಮಗೆ ಹೊಳೆದಿದ್ದರ ವಿರುದ್ಧವಾಗಿರುವಂತಹ ಅಥವಾ ನಮ್ಮ ಹೊಳವಿಗೆ ಸಿಗದೆ ಇರುವಂತಹ ಇನ್ನೇನೋ ನಡೆದಿರಬಹುದು.

ಒಂದು ಗಿಡ ನೋಡಿದಾಕ್ಷಣ ಅದರ ಹೊರಗನ್ನು ನೊಡಿ ನಾವು ಅದರ ಒಳಗನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಒಂದು ಗಿಡ ಆಕಾಶದೆತ್ತರಕ್ಕೆ ಬೆಳೆದು ನಿಂತಾಗ ಅದರ ಬೇರುಗಳು ಎಷ್ಟು ದೊಡ್ಡವಿರಬಹುದು, ಎಷ್ಟೆಷ್ಟು ಅಗಲ ಹರಿದಾಡಿರಬಹುದು ಎಂದು ನಾವು ಮೇಲೆಯೇ ಊಹಿಸಲು ಅಸಾಧ್ಯ. ಏಕೆಂದರೆ ಮೇಲೆ ಮೈಬಿಟ್ಟು ನಿಂತ ಗಿಡ, ಕೆಳಗೂ ಕೂಡ ಅದೇ ರೀತಿಯಲ್ಲಿ ಮೈಚಾಚಿ, ಮೈಬಿಟ್ಟು ನಿಲ್ಲಲು ಸಾಧ್ಯವಿಲ್ಲ. ಇನ್ನೂ ಮೇಲೆ ಸರಿಯಾಗಿ ಮೈಬಿಟ್ಟು ನಿಲ್ಲದ, ದೊಡ್ಡದಾಗಿ ಕಾಣದ ಮರ ಕೆಳಗೂ ಕೂಡ ಮೇಲಿನಂತೆ ಇರಲು ಸಾಧ್ಯವಿಲ್ಲ.

ಅಲ್ಲಮಪ್ರಭು ಮುಂದುವರೆದು ತನ್ನ ವಚನದಲ್ಲಿ ಹೇಳೊದು ಹೀಗೆ "ಹಿಂದಣ ಹಿಂದನು, ಮುಂದಣ ಮುಂದನು ತಂದೆ ತೊರಿದನು ನಮ್ಮ ಗುಹೇಶ್ವರ" ಎಂದು ಹೇಳುತ್ತಾನೆ. ಅಂದರೆ ಹಿಂದಿನದನ್ನು ಮತ್ತು ಮುಂದಿನದನ್ನು ನಮ್ಮ ಗುಹೇಶ್ವರ ತಂದೆ

ನಮಗೆ ತೋರಿದ್ದಾನೆ. ಅಂದರೆ ಕೇವಲ ಹಿಂದಣ-ಮುಂದಣ ತಿಳಿಸಿದ್ದಾನೆಂದು ಅಲ್ಲಮ ಹೇಳುವುದಿಲ್ಲ. ಅದು ಸೀಮಿತವಾದ ಮಾತಲ್ಲ. ಅವನ ಮಾತಿನಲ್ಲಿ ಅಪಾರವಾದ ಅತ್ಯಂತ ವಿಶಾಲವಾದ ಮತ್ತು ಅತ್ಯಂತ ದೂರ ದೃಷ್ಟಿಯ ಆಲೋಚನೆ ಅರ್ಥೈಸಿಕೊಂಡಿರುವ ಅನುಭವ ಅರಿತುಕೊಂಡಿರುವ ಅಗಾಧತೆ ಅಷ್ಟೆ ಅಲ್ಲ ಮುಂದೆ ಆಗಬಹುದಾದ, ಹಿಂದೆ ಅಂದಿರುವ ಎಲ್ಲವನ್ನು ತಿಳಿದುಕೊಂಡಿರುವ ಶಕ್ತಿಯನ್ನು ನಮ್ಮ ಗುಹೇಶ್ವರ ನಮಗೆ ನೀಡಿದ್ದಾನೆ ಎಂದು ಅಲ್ಲಮ ಹೇಳುತ್ತಾನೆ. ಈ ಮಾತಿನಲ್ಲಿ ಅಲ್ಲಮಪ್ರಭು ಇನ್ನಷ್ಟು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಾನೆ. ನನಗೆ ಎಲ್ಲವನ್ನು ತಿಳಿಸಿಕೊಟ್ಟಿದ್ದು, ನನ್ನ ತಂದೆ ಗುಹೇಶ್ವರ. ಹಿಂದಿನದು ಮುಂದಿನದನ್ನು ನನ್ನ ಗುರು ನನಗೆ ಹೇಳಿಕೊಟ್ಟಿದ್ದಾನೆ. ಅಂದ ಮೇಲೆ ನೀವುಗಳು ಕೂಡ ಪ್ರಯತ್ನಸಿದರೆ ನಿಮಗೆ ಕೂಡ ಗುಹೇಶ್ವರನಂತ ತಂದೆ ಅಥವಾ ಗುರು ಸಿಕ್ಕು ನೀವು ಕೂಡ ತಿಳಿದುಕೊಳ್ಳಲು ಸಾಧ್ಯ ಎನ್ನುವ ಮಾತನ್ನು ಅಲ್ಲಮಪ್ರಭು ಅತ್ಯಂತ ಚಾಣಾಕ್ಷತನದಿಂದ ಹೇಳಿದ್ದಾನೆ.

ವಚನ- ಎರಡು : ಅಲ್ಲಮಪ್ರಭುವಿನ ವಚನ ಎರಡು ಮೊದಲಿನಂತೆ ಅನ್ನಿಸಿದರೂ ಕೂಡ ಇದು ಅತ್ಯಂತ ವೈಶಿಷ್ಟ್ಯಪೂರ್ಣ, ಈ ವಚನದ ಮೊದಲ ಸಾಲು ನೋಡೋಣ "ಎಣ್ಣೆ ಬೇರೆ, ಬತ್ತಿ ಬೇರೆ ಎರಡು ಕೂಡಿ ಸೊಡರಾಗಿತ್ತು" ಅನ್ನೊದು ಮೊದಲ ಸಾಲು ಈ ಸಾಲನ್ನು ಇಟ್ಕೊಂಡು ನಾವು ಚಿಂತಿಸೋದಾದರೆ ಎಣ್ಣೆ ಮತ್ತು ಬತ್ತಿ ಬೇರೆ, ಬೇರೆ ವಸ್ತುಗಳೆ ಜೀವ ತುಂಬುವಂತಹ ಶಕ್ತಿ ಇರುವಂತಹವು. ಹಾಗೆಯೇ ಈ ಎರಡು ಕೂಡಿದಾಗ ಅದು ದೀಪವಾಗುತ್ತೆ ಅನ್ನೋದು ಕೂಡ ಹೌದು.

ಮೇಲಿನ ಎರಡು ವಸ್ತುಗಳು ತಮ್ಮಲ್ಲಿ ಜೀವವಿರಿಸಿಕೊಂಡು ಬೇರೆಯವರಿಗೆ ಜೀವ ನೀಡುವ ಹಾಗೆ ಈ ಎರಡು ಕೂಡಿದಾಗಲೂ ಕೂಡ ತಮ್ಮ ಮೊದಲಿನ ಗುಣವನ್ನು ಕಳೆದುಕೊಳ್ಳೋದಿಲ್ಲ. ಅನ್ನೋದು ಅತ್ಯಂತ ಮಹತ್ವದ್ದು, ಎಲ್ಲಕ್ಕೂ ಮಿಗಿಲಾಗಿ ಈ ಎರಡು ವಸ್ತುಗಳು ಎಣ್ಣೆ ಮತ್ತು ಬತ್ತಿಗಳೆರಡು ಮೊದಲು ತಾವು ಹೊಂದಿದ ಶಕ್ತಿಯನ್ನು ದ್ವಿಗುಣಗೊಳಿಸಿಕೊಳ್ಳುತ್ತೇವೆ. ಜೊತೆಗೆ ಮತ್ತೊಂದು ಶಕ್ತಿ ಪಡೆದುಕೊಳ್ಳುತ್ತೇವೆ. ಅದೇನೆಂದರೆ ಬೆಳಕು ನೀಡುವ ಶಕ್ತಿ. ಈ ಎರಡು ಶಕ್ತಿಗಳು ಬೇರೆ, ಬೇರೆ ಆಗಿದ್ದು ಕೂಡಿದಾಗ ಮತ್ತೊಂದು ಶಕ್ತಿಯನ್ನು ಹುಟ್ಟುಹಾಕುತ್ತೇವೆ.

ಈ ಎರಡು ವಸ್ತುಗಳು ಕೂಡಿದಾಗ ಹುಟ್ಟುಹಾಕುವ ಶಕ್ತಿ ಅತ್ಯಂತ ಪ್ರಭಾವದ್ದಾಗಿರುತ್ತದೆ. ಈ ಶಕ್ತಿಗೆ ಕೇವಲ ಬೆಳಕು ನೀಡುವ ಒಂದೇ ಉಪಯುಕ್ತತೆ ಇರಲಾರದೆ ಅನೇಕ ರೀತಿಯ ಉಪಯುಕ್ತ ಮತ್ತು ನಾಶಗೊಳಿಸಲು ಬೇಕಾದ ಅಗಾಧವಾದ ಶಕ್ತಿ ಕೂಡ ಈ ಎರಡು ವಸ್ತುಗಳು ಮಿಲನದಿಂದ ಹುಟ್ಟುವ ಶಕ್ತಿಗೆ ಇದೆ. ಈ ಬೆಂಕಿ ಬೇಕಾದ ಆಹಾರ ಬೇಯಿಸುವುದಕ್ಕೆ ಕೂಡ ಉಪಯೋಗ ಆಗಬಹುದು ಹಾಗೆ ಅದೇ ಆಹಾರ ತಿನ್ನೋದಕ್ಕೆ ಬಾರದಂತೆ ಕೂಡ ಕೆಡಿಸಬಲ್ಲದು. ಇದೆ ಬೆಂಕಿ ಇಡಿಯಾದ ವಸ್ತುವನ್ನು ಆವರಿಸಿ ಸಂಪೂರ್ಣ ಬೂದಿ ಆಗಿಸುವ ಶಕ್ತಿ ಹೊಂದಿದೆ. ಅದು ನಿರ್ಜೀವ ವಸ್ತು ಆಗಿರಲಿ, ಸಜೀವ ವಸ್ತು ಆಗಿರಲಿ ಈ ಬೆಂಕಿ ತನ್ನೊಳಗೆ ಲೀನವಾಗಿಸುವ ಅಘಾದ ಶಕ್ತಿ ಹೊಂದಿದೆ.

ಒಂದು ಎಣ್ಣೆ-ಬತ್ತಿ ಒಂದು ದೀಪವಾಗಿ ಈ ದೀಪ ಹಲವು ದೀಪಗಳನ್ನು ಬೆಳಗುವ ಬೆಳಕು ಚೆಲ್ಲುವ ಶಕ್ತಿ ಹೊಂದಿದಂತೆ ಅಷ್ಟೆ ವೇಗದ ರೀತಿಯಲ್ಲಿ ನಾಶ ಮಾಡುವ ತಾಕತ್ತನ್ನು ಈ ಬೆಳಕು ಹೊಂದಿದೆ. ಅದಕ್ಕಾಗಿಯೇ 'ಜ್ಞಾನದ ಬಲದಿಂದ ಅಜ್ಞಾನದ ಕೇಡು ' ಎಂದಿರುವುದು. ಈ ಎಣ್ಣೆ-ಬತ್ತಿನು ನಂತರ ಅಲ್ಲಮಪ್ರಭು "ಪಾಪ ಬೇರೆ, ಪುಣ್ಯ ಬೇರೆ, ಎರಡು ಕೂಡಿ ಒಡಲಾಗಿತ್ತು." ಎಂದು ಹೇಳುವ ಮೂಲಕ ಹೊಸ ಸೃಷ್ಟಿಯ ಬಗ್ಗೆ ರೋಚಕತೆಯನ್ನು ಬಿಚ್ಚಿಡುತ್ತಾನೆ. ಪಾಪ ಬೇರೆ, ಪುಣ್ಯಬೇರೆ, ಈ ಎರಡು ಕೂಡಿ ಒಡಲಾಗಿತ್ತು ಎಂದು ಹೇಳುವ ಅಲ್ಲಮ ಈ ಲೋಕದ ಎಲ್ಲವನ್ನು ಒಂದು ರೀತಿಯಲ್ಲಿ ಬಿಚ್ಚಿಟ್ಟ ಹಾಗೆ.

ಈ ಪಾಪ-ಪುಣ್ಯಗಳು ಇರದೇ ಹೋದರೆ ಈ ಜಗತ್ತಿನ ಎಲ್ಲ ಆಟಗಳಿಗೆ ಕಾರಣವಾಗಿರುವ ಈ ಮನುಷ್ಯ ಜೀವ ಇವತ್ತು ಕೋಟಿ, ಕೋಟಿ ಬೆಳೆದು ನಿಲ್ಲುತ್ತಿರಲಿಲ್ಲ. ನಮ್ಮ ಹಿರಿಯರು ಹೇಳುತ್ತಿದ್ದ ಮಾತನ್ನೇ ನಾವು ಸಹಜವಾಗಿ ಗಮನಿಸುವುದಾದರೆ "ಸಾವಿರ ಸುಳ್ಳು ಹೇಳಿ ಮದುವೆ ಮಾಡಿಸು" ಅನ್ನೋ ಮಾತು ಕೂಡ ನಮ್ಮ ಪರಂಪರೆಯಲ್ಲಿಯೇ ಇದೆ. ಈ ಎರಡು ವೈರುದ್ಧಗಳ ನಡುವೆ ಇರುವ ನಮ್ಮ ಬದುಕಿನ ಬಗ್ಗೆ ಅಲ್ಲಮ ಬಹಳ ಸೂಚ್ಯವಾಗಿ ಪಾಪಬೇರೆ, ಪುಣ್ಯಬೇರೆ ಆದರೆ ಇವೆರಡು ಸೇರಿದರೆ ಮಾತ್ರ ಒಡಲು ಆಗಲು ಸಾಧ್ಯವಿದೆ ಎಂದು ಹೇಳಿದ್ದಾನೆ.

ಒಂದು ಗಂಡು-ಹೆಣ್ಣು ಸೇರುವುದೇ ತಪ್ಪು ಎಂದಾದರೆ ಮತ್ತೊಂದು ಜೀವ ಹುಟ್ಟುವುದಕ್ಕೂ ಸಾಧ್ಯವಿಲ್ಲ. ಲೋಕದಲ್ಲಿ ಲೋಕದಲ್ಲಿ ಜೀವ ಹುಟ್ಟದಿದ್ದರೇ ಈ ಬದುಕು ಈ ನೂರಾರು ಸಮಸ್ಯೆ, ಪ್ರಶ್ನೆ ಇನ್ನೇಲ್ಲವೂ ಒಟ್ಟಾರೆ ಈ ಜಗತ್ತು ಕೂಡ ಒಂದು ಕಾಲಕ್ಕೆ ಶೂನ್ಯವಾಗಿ ಈಗ ಇದನ್ನು ಬರೆಯುತ್ತಿರುವ ನಾನು ಕೂಡ ಇರದೆ ಹೋಗುತ್ತಿದ್ದೆ ಅಲ್ಲವೇ? ಅಲ್ಲಮ ಹೇಳುವ ಈ ಮಾತು ಎಷ್ಟು ಅರ್ಥಪೂರ್ಣವಾಗಿದೆ ಅಂದರೆ ಒಬ್ಬ ಮನುಷ್ಯ ಯಾವಾಗಲೂ ೫೦:೫೦ ಆಗಿರುತ್ತಾನೆ ಎಂದರ್ಥ. ಒಳ್ಳೆಯ ಮನುಷ್ಯನ ಹತ್ತಿರ ಕೆಟ್ಟ ಗುಣಗಳಿರುತ್ತವೆ. ಹಾಗೆಯೇ ಕೆಟ್ಟ ಮನುಷ್ಯನ ಹತ್ತಿರ ಕೂಡ ಒಳ್ಳೇ ಗುಣ ಇರುತ್ತವೆ.

ವಚನದ ಮುಂದಿನ ಸಾಲು ಹೀಗಿದೆ "ಮಿಗಬಾರದು ಮಿಗದಿರಬಾರದು" ಈ ಮಾತಿನಲ್ಲಿಯೂ ಕೂಡ ಅಲ್ಲಮ ತನ್ನ ಜಾಣ್ಮೆ ಮೆರೆದಿದ್ದಾನೆ. ಹಾಗೆ ಈ ಮಾತಿನ ಮೂಲಕ ಮನುಷ್ಯನಿಗೆ ಎಚ್ಚರಿಕೆಯ ಛಾಟಿಯನ್ನೆಭಿಸುತ್ತಾನೆ. 'ಮಿಗಬಾರದು' ಅಂದರೆ 'ಉರಿಬಾರದು' ಉರಿಬಾರದೆಂದರು ಯಾವುದನ್ನು ಹೆಚ್ಚು ಮಾಡಬಾರದು ಅಂದಹಾಗೆ. ಅಲ್ಲಮಪ್ರಭು ಮಿಗಬಾರದು ಎಂದಷ್ಟೇ ಹೇಳುವುದಿಲ್ಲ ಮುಂದುವರೆದು "ಮಿಗದಿರಬಾರದು" ಎಂದು ಹೇಳುತ್ತಾನೆ. ಅಂದರೆ ಉರಿಯಬಾರದು, ಉರಿಯದೇ ಇರಬಾರದು ಎಂದರ್ಥ. ಇದನ್ನು ಹತ್ತು ಹಲವು ರೀತಿಯಲ್ಲಿ ನಾವು ವಿಶ್ಲೇಶಿಸಬಹುದಾಗಿದೆ. ನಾವು ಒಂದು ಕಥೆ ಕೇಳಿದಂತೆ "ಹಾವು ಕಡಿಯಬರದು" ಎಂದು ಗೊತ್ತಾದರೆ ಎಲ್ಲರೂ ಅದಕ್ಕೆ ಹೊಡೆಯೋದು, ಬಡಿಯೋದು ಮಾಡುವುದರೊಂದಿಗೆ ಯಾರು ಕೂಡ ಅದನ್ನು ಕಂಡರೆ ಹೇದರೊದಿಲ್ಲ. ಆದರೆ ಆ ಹಾವು ಹೆಡೆ ಎತ್ತಿ ಹೆದರಿಸುತ್ತಿದ್ದರೆ ಯಾರು ಅದರ ಗೊಡವೆಗೆ ಹೋಗುವುದಿಲ್ಲ ಅಲ್ಲವೇ? ಈ ಅರ್ಥದಲ್ಲಿಯೇ ಅಲ್ಲಮಪ್ರಭು "ಮಿಗಬಾರದು ಮಿಗದಿರಬಾರದು" ಎಂದು ಹೇಳಿದ್ದಾನೆ. ನಾಗರಹಾವು ಕಥೆ ಕೇವಲ ಸಾಂಕೇತಿಕ ರೂಪಕ ಅದನ್ನೇ ನಾವು ಅನ್ವಯಿಸಿಕೊಂಡರೆ ಸಾಕು.

ಅಲ್ಲಮಪ್ರಭು ಮುಂದುವರೆದು, ಮತ್ತೊಂದು ವಿಶಿಷ್ಠ ಮಾತನ್ನು ಹೇಳುತ್ತಾನೆಅದೇನೆಂದರೆ "ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು "ಒಡಲು ಇಚ್ಛೆ ಮಾಡಿದರೆ ಅದನ್ನು ಒಂದು ನಿಮಿಷ ತಾಳದಂತೆ ಅನುಭವಿಸಬೇಕು ಇಲ್ಲವಾದಲ್ಲಿ ಅದು ಗುಂಗಿ ಹುಳುವಾಗಿ ತಲೆಯಲ್ಲಿ ಕೊರೆಯುವುದಕ್ಕೆ ಕಾರಣವಾಗುತ್ತದೆ. ಇದರಿಂದ ಇಡೀ ನೆಮ್ಮದಿ ಹಾಳಾಗುತ್ತದೆ. ಅಂದರೆ ಯಾವುದನ್ನೋ ತಿನ್ನಬೇಕು ಅನ್ನಿಸಿದಾಗ ತಿಂದು ಬಿಟ್ಟರೆ ಆಯಿತು. ತಿನ್ನದೆ ಹೋದರೆ ತಿನ್ನಬೇಕಿತ್ತು ಅಂತಾ ಮನಸ್ಸಿನಲ್ಲಿ ಕೊರೆಯುವುದಕ್ಕೆ ಆರಂಭವಾಗುತ್ತದೆ. ಈ ಕೊರಗು ಸದಾ ಕಾಡೋದಕ್ಕೆ ಸಿದ್ಧವಾಗುತ್ತದೆ. ಅದಕ್ಕೆ ಅಲ್ಲಮಪ್ರಭು ಸಮರ್ಥವಾಗಿ, ಸೂಚ್ಯವಾಗಿ 'ಒಡಲಿಚ್ಛೆಯ ಸಲಿಸದೆ ನಿಮಿಷ ವಿರಬಾರದು ಎಂದು ಹೇಳಿದ್ದಾನೆ.

ಒಡಲ ಇಚ್ಛೆ ಅನ್ನೋದು ಅದು ದೇಹದ ಪಂಚೇಂದ್ರಿಯಗಳಿಗೂ ಸಂಬಂಧಿಸಿದ್ದು. ಏಕೆಂದರೆ ಒಡಲು ಅನ್ನೋದು ಕೂಡ ಅಲ್ಲಮನೆ ಹೇಳುವಂತೆ ಪಾಪ-ಪುಣ್ಯಗಳಿಂದ ಕೂಡಿರುವಂತಹದ್ದು, ಈ ಪಾಪ-ಪುಣ್ಯಗಳಿಂದ ಕೂಡಿರುವಂತಹ ಒಡಲಿನಲ್ಲಿ ಈ

ಪಂಚೇಂದ್ರಿಯಗಳು ಕೂಡ ಇವೆ. ಇವುಗಳು ಬಯಸುವ ಬಯಕೆಯನ್ನು ನಿಮಿಷದೊಳಗೆ ತೀರಿಸಿದರೆ ಸಾಕು. ಇವುಗಳು ಮನಸ್ಸಿನ ಹೊಯ್ದಾಟಕ್ಕೆ ಕಾರಣ ಆಗೊದಿಲ್ಲ. ಇಲ್ಲವಾದಲ್ಲಿ ಈ ಐದು ಹುಚ್ಚು ಖೋಡಿ ಮನಸ್ಸನ್ನು ಕುಣಿಸಲು ಕಾರಣ ಆಗುತ್ತವೆ. ಮುಂದಿನ ಸಾಲು ನೋಡೋಣ "ಕಾಯಗುಣವನಳಿದು ಮಾಯಾಜ್ಯೋತಿ ವಾಯುವ ಕೊಡುವ ಮುನ್ನ ಭಕ್ತಿಯ ಮಾಡಬಲ್ಲಾತನೆ ದೇವ ಗುಹೇಶ್ವರ" ಎಂದು ಹೇಳುತ್ತಾನೆ ಇದು ವಚನದ ಕೊನೆಯ ಸಾಲು ಕೂಡ ಹೌದು. ಈ ಸಾಲು ಬಹಳ ಸ್ಪಷ್ಟವಾಗಿ ಮನುಷ್ಯ ದುಡಿದು ಊಟಮಾಡಬೇಕು ಅನ್ನೋದನ್ನು ಅತ್ಯಂತ ಸ್ಪಷ್ಟವಾಗಿ ಹೇಳುತ್ತದೆ. ಈ ದೇಹ ಅನ್ನೋದು ಒಂದು ಮಾಯಾಜ್ಯೋತಿ ಇದು ಯಾವಾಗ ಆರುತ್ತದೆ ಎಂದು ಹೇಳೊದಕ್ಕೆ ಆಗೋದಿಲ್ಲ. ಅಲ್ಲದೆ ಈ ಜ್ಯೋತಿ ಯಾವಾಗಲು ತನ್ನ ಶಕ್ತಿ ಕಳೆದುಕೊಳ್ಳುತ್ತದೆ ಅನ್ನುವುದು ಕೂಡಾ ಅಂದರೆ ಇನ್ನೇನು ಎಣ್ಣೇ ಮುಗಿಯಿತು ಅಂದರೆ ಶಕ್ತಿ ಇಲ್ಲಾ ಅನ್ನುವಂತೆ ಆಗುವುದು. ಹೀಗೇ ಆಗುವ ಮುನ್ನಾ ದುಡಿಯಬೇಕು ಅಂದರೆ ದೇಹದಲ್ಲಿ ಕಾಯ ಗುಣ ಇರುವುದರೊಳಗೆ ಕಾಯಕವನ್ನು ಮಾಡಬೇಕು ಈ ಕಾಯಕವನ್ನು ಮಾಡದೇ ಊಟ ಮಾಡುವುದು ಕೂಡಾ ದೇಹಕ್ಕೆ ತರವಲ್ಲಾ ಎಂದು ಹೇಳಿದಂತೆ ಇದನ್ನೇ ಬಸವಣ್ಣ "ಕಾಯಕವೇ ಕೈಲಾಸ',' "ಕೈ ಕೇಸರಾದರೇ ಬಾಯಿ ಮೊಸರು ಅನ್ನುವ ಮಾತುಗಳು ನಮ್ಮಲ್ಲಿ ಇವತ್ತಿಗೂ ಪ್ರಚಲಿತವಾಗಿವೆ. ಇದನ್ನು ಅಲ್ಲಮಪ್ರಭು ಕೂಡಾ ಅತ್ಯಂತ ಮಹತ್ವದ ನೆಲೆಯಲ್ಲಿ ಹೇಳಿದ್ದಾನೆ. ಎಲ್ಲದಕ್ಕೂ ಮುಖ್ಯವಾಗಿ ಈ ದೇಹ ಎನ್ನುವುದು ನೀರಿನ ಮೇಲಿನ ಗುಳ್ಳೆ ಎಂದು ಹೇಳಿಲ್ಲವೇ ? ಹಾಗೇ ಅಲ್ಲಮ ಇದು 'ಮಾಯಾ ಜ್ಯೋತಿ 'ಈ ಮಾಯಾ ಜ್ಯೋತಿ ಯಾವಾಗ ನಂದಿ ಹೋಗುತ್ತದೆಯೋ ? ಅಂದರೆ ಯಾವಾಗ ಪ್ರಾಣ ಕಳೆದುಕೊಳ್ಳುತ್ತದೆಯೋ ಯಾರಿಗೂ ಗೊತ್ತಿಲ್ಲಾ. ಈ ಮಾಯಾ ಜ್ಯೋತಿ ಇನ್ನೂ ಗಾಳಿಗೆ ಸಿಕ್ಕರೆ ಬಹು ಬೇಗ ಆರಿ ಹೋಗುತ್ತದೆ. ನಂದಿ ಹೋಗುತ್ತದೆ. ಈ ನಂದಿ ಹೋಗುವ ಮುನ್ನ ಭಕ್ತಿಯನ್ನು ಮಾಡಬೇಕು. ' ಈ ಮಾಯಾ ಜ್ಯೋತಿ' ವಾಯು ಕೋಡುವ ಮುನ್ನ ಭಕ್ತಿ ಮಾಡುವಂತಹವುನೇ ಗುಹೇಶ್ವರ ದೇವನಾಗುತ್ತಾನೆ ಎಂದು ಕೂಡಾ ಅಲ್ಲಮ ಇಲ್ಲಿ ಬಹು ವಿಶಿಷ್ಠವಾಗಿ ಹೇಳುತ್ತಾನೆ.

ಈ ಮಾತಿನಲ್ಲಿ ಅಲ್ಲಮ ಪ್ರಭು ಮತ್ತೇ ಎಚ್ಚರಿಸುತ್ತಾನೆ, ಅದೆಂದರೆ ' ನೀನೆ ದೇವರು ' 'ನಿನ್ನಲ್ಲಿಯೇ ದೇವರು ಇದ್ದಾನೆ' ಈ ದೇವರನ್ನು ಕಾಣುವಂತಹ ಕೆಲಸವನ್ನು ನೀನು ಮಾಡಬೇಕು. ಅನ್ನುವುದನ್ನು ಅಲ್ಲಮಪ್ರಭು ಅತ್ಯಂತ ಮಹತ್ವದ ನೆಲೆಯಲ್ಲಿ ಎಚ್ಚರಿಕೆಯನ್ನು ಮೂಡಿಸುತ್ತಾನೆ. ಒಟ್ಟಾರೆ ಇಲ್ಲಿರುವ ಈ ಎರಡು ವಚನಗಳು ಅಲ್ಲಮನ ತ್ರೀಕಾಲ ಜ್ಞಾನವನ್ನು ತಿಳಿಸುವ ಜೊತೆಗೆ ಭೂಮಿ ಮೇಲೆ ಇರುವ ಬದುಕಿನ ಒಳ ಚಳುವಳಿಯ ಚಿಂತನೆ ಕೂಡಾ ಆಗಿವೆ.

## ಗ್ರಂಥ ಋಣ


1. ಪರಿಪೂರ್ಣದೆಡೆಗೆ–ಡಾ.ಎಚ್.ತಿಪ್ಪೇರುದ್ರಸ್ವಾಮಿ, ಗೀತಾ ಬುಕ್ ಹೌಸ್, ಮೈಸೂರು.
2. ವಚನ ಸಂಪುಟ– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
3. ವಚನ ಸಾಹಿತ್ಯ–ಎಂ.ಚಿದಾನಂದಮೂರ್ತಿ, ಸ್ವಪ್ನಾ ಬುಕ್ ಹೌಸ್ ಬೆಂಗಳೂರು.